ಆದ್ದರಿಂದಲೇ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಗುರುವಿಗೆ ಮಹತ್ವವಾದ ಸ್ಥಾನವಿದೆ. ಎಲ್ಲಾ ವಿದ್ಯೆಗಳಿಗೂ ಮೂಲವೂ ಆಧಾರವೂ ಪರಮ ವಿದ್ಯೆಯಾದ ಅಧ್ಯಾತ್ಮ ವಿದ್ಯೆ. 'ಯಾವುದನ್ನು ತಿಳಿದರೆ ಉಳಿದೆಲ್ಲ ವನ್ನೂ ತಿಳಿದಂತಾಗುತ್ತದೆಯೋ' ಅದೇ ಪರಾ ವಿದ್ಯೆ. ಈ ವಿದ್ಯೆ ಯನ್ನು ತಿಳಿಸಿಕೊಡುವ ಗುರು ಕೂಡ ಸಾಮಾನ್ಯನಲ್ಲ. ಅವನು ಪರಬ್ರಹ್ಮನ ಸಾಕ್ಷಾತ್ಕಾರವನ್ನು ಪಡೆದ ಬ್ರಹ್ಮಜ್ಞಾನಿಯೇ ಆಗಿರು ತ್ತಾನೆ. ಆ ಪರಬ್ರಹ್ಮನೇ ಗುರುವಿನ ರೂಪದಲ್ಲಿ ತನ್ನೆದುರು ಜೀವಂತವಾಗಿ ಮೈದೋರಿ ಬಂದಿದ್ದಾನೆ ಎಂದು ಶಿಷ್ಯನು ಗುರು ವನ್ನು ಆದರಿಸಿ ಪರಮ ಪದವಿಯನ್ನು ಪಡೆಯುತ್ತಾನೆ.

ತೈತ್ತಿರೀಯ ಉಪನಿಷತ್ತಿನಲ್ಲಿ ಬರುತ್ತದೆ: '**ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**'– ಎಂದರೆ ಪರಮಾತ್ಮ ನನ್ನು ತಿಳಿಯಲೆಂದು ಹೊರಟ ಮಾತುಗಳು ಇಂದ್ರಿಯ ಮನಸ್ಸು ಬುದ್ಧಿಗಳು ಗ್ರಹಿಸಲಾರದೆ ಹಿಂದಿರುಗಿರುವಂತೆ! ಇಂತಹ ಅವ್ಯಕ್ತ ವೂ, ಅನಿರ್ವಚನೀಯವೂ, ಆತ್ಯಂತಿಕ ದುಃಖ ನಿವಾರಣೆಯೂ ಆದ ಪರಬ್ರಹ್ಮ ತತ್ತ್ವವನ್ನು ಅರಿತು, ಮನುಷ್ಯಜೀವನದ ಚರಮ ಗುರಿಯಾದ ಈಶ್ವರ ಪ್ರಾಪ್ತಿಯನ್ನು ಸಂಪಾದಿಸಬೇಕಾದರೆ ಪರಮ ಗುರುವಿನ ಮಾರ್ಗದರ್ಶನವಿಲ್ಲದೆ ಗುರಿ ತಲುಪುವುದು ಸಾಧ್ಯ ವಿಲ್ಲದ ಮಾತು. ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ: ''ಆಧ್ಯಾ ತ್ಮಿಕ ಮಾರ್ಗವನ್ನು ಅನುಸರಿಸುವುದು ಬಹಳ ಕಠಿಣ. ಒಬ್ಬ ವ್ಯಕ್ತಿ ಅದೆಷ್ಟೇ ಬುದ್ಧಿವಂತನಾದರೂ, ಸಾಕ್ಷಾತ್ಕಾರ ಪಡೆದ ಗುರುವಿನ ಸಹಾಯವಿಲ್ಲದೆ ಹೋದರೆ, ಅವನು ಆ ಮಾರ್ಗದಲ್ಲಿ ಎಡವ ಬಹುದು.'' ಭಗವಂತ ಅಂತರ್ಯಾಮಿ, ಅವನು ನಮ್ಮ ಪ್ರಾರ್ಥನೆ ಯನ್ನು ಕೇಳುತ್ತಾನೆ, ನಮ್ಮ ಅಗತ್ಯಗಳನ್ನು ಪೂರೈಸುತ್ತಾನೆ. ಬಾಹ್ಯ ಗುರುವಿನ ಆವಶ್ಯಕತೆ ಯಾಕೆ?–ಇದು ಹಲವರ ಅಭಿಪ್ರಾಯ. ಅವತಾರ ಪುರುಷರನ್ನು ಹೊರತುಪಡಿಸಿ ಸಾಮಾನ್ಯವಾಗಿ ಈ ಮಾತು ಎಲ್ಲರಿಗೂ ಅನ್ವಯಿಸುವುದಿಲ್ಲ. ಅವರೂ ಶಾಸ್ತ್ರ ವಾಕ್ಯ ಗಳಿಗೆ ಮಾನ್ಯತೆ ನೀಡಲು ಗುರುಮುಖೇನ ಉಪದೇಶವನ್ನು ಪಡೆದು, ಸಾಧನೆಯಿಂದ ಪರಮಪದವಿಯನ್ನು ಸಿದ್ಧಿಸಿಕೊಂಡು ಆಧ್ಯಾತ್ಮಿಕ ಕ್ಷೇತ್ರದ ಮೇರು ಶಿಖರಗಳಾಗಿದ್ದಾರೆ. ಅನೇಕ ಮಹಾ ಪುರುಷರ ಜೀವನವನ್ನು ಅವಲೋಕಿಸಿದಾಗ 'ಗುರುವಿನ ಪ್ರಾಮು ಖ್ಯತೆ ಬಹಳವಿದೆ' ಎಂಬುದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಸ್ವಾಮಿ ಬ್ರಹ್ಮಾನಂದರ ಈ ಮಾತು ಮನನಯೋಗ್ಯವಾದುದು; ''ಕದಿಯುವುದನ್ನು ಕಲಿಯಬೇಕಾದರೂ ಒಬ್ಬನಿಗೆ ಗುರುವಿನ ಆವಶ್ಯ ಕತೆಯಿದೆ, ಮತ್ತೆ ಈ ಬ್ರಹ್ಮವಿದ್ಯೆ ಪಡೆಯಲು ಗುರು ಬೇಡವೆ?''

ಗುರುಸ್ತೋತ್ರವು ಹೀಗೆ ಹೇಳುತ್ತದೆ:

**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥**

'ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದವನ ಕಣ್ಣನ್ನು ಜ್ಞಾನವೆಂಬ ಅಂಜನಶಲಾಕೆಯಿಂದ ಬಿಡಿಸಿದ ಶ್ರೀಗುರುವಿಗೆ ನಮನಗಳು.'

ಗುರುವಿನ ಸ್ಥಾನ ಬರಿಯ ಪಾಂಡಿತ್ಯದ ಪೀಠವಲ್ಲ. ಆಧ್ಯಾ ತ್ಮಿಕ ಅನುಭವದ ಆಳದಲ್ಲಿ ಮುಳುಗಿ, ದಿವ್ಯಜ್ಞಾನದ ಬೆಳಕನ್ನು ಕಂಡು, ದಿವ್ಯಪ್ರೇಮದ ಸುಧೆಯನ್ನು ಹೃದಯದಲ್ಲಿ ತುಂಬಿ ಕೊಂಡು, ಪರಾತ್ಪರ ವಸ್ತುವಿನಿಂದ ಅನುಜ್ಞೆ–ಅಂಧಕಾರವನ್ನು ಪಡೆದುಕೊಂಡವರು ಮಾತ್ರ ಗುರುವಿನ ಸ್ಥಾನಕ್ಕೆ ಅರ್ಹರು. ನೀನು ಯಾರು? ನಿನ್ನ ನಿಜವಾದ ಸ್ವರೂಪವೇನು? ಎಂಬುದನ್ನು ಶಿಷ್ಯರಿಗೆ ತಿಳಿಯಪಡಿಸಿ, ಅವರಿಂದ ಒಂದು ಶಿಷ್ಯ ಪರಂಪರೆ ಯನ್ನು ನಿರ್ಮಾಣ ಮಾಡುವನು. ಆ ಪರಂಪರೆಯಲ್ಲಿ ಬರುವ ಅಸಂಖ್ಯ ಮಹನೀಯರು ತಮ್ಮ ಉಜ್ವಲವಾದ ತಪಸ್ಸು, ಪರಿ ಶುದ್ಧವಾದ ಜೀವನ, ಆತ್ಮ ಸಾಕ್ಷಾತ್ಕಾರ ಹಾಗೂ ಮಹಾಗುರುವಿನ ನಿರಂತರ ಸಾನ್ನಿಧ್ಯದಿಂದ 'ಗುರು' ಪದವಿಯನ್ನು ಅಲಂಕರಿಸು ತ್ತಾರೆ. ಸ್ವಾಮಿ ವಿವೇಕಾನಂದರ ಈ ಮಾತುಗಳು ಇಲ್ಲಿ ಪ್ರಸ್ತುತ ವೆನಿಸುತ್ತವೆ: ''ಆಧ್ಯಾತ್ಮಿಕ ಜೀವನ ಜಾಗೃತವಾಗಬೇಕಾದರೆ, ಅದಕ್ಕೆ ಪ್ರೇರಣೆ ಮತ್ತೊಂದು ಜಾಗೃತವಾದ ಜೀವಿಯಿಂದ ಬರಬೇಕು. ಯಾರಿಂದ ಇಂತಹ ಪ್ರೇರಣೆ ಬರುವುದೋ ಅವರೇ ಗುರುಗಳು. ಯಾರಿಗೆ ಇದನ್ನು ಕೊಡುವರೋ ಅವನೇ ಶಿಷ್ಯ.'' ಒಂದು ಕಡೆ ಶ್ರೀರಾಮಕೃಷ್ಣರು ಹೇಳುತ್ತಾರೆ; ''ಸಿಕ್ಕಿಸಿಕ್ಕಿದವರೆಲ್ಲಾ ಗುರುಗಳು ಆಗಲಾರರು. ಮರದ ದಿಮ್ಮಿ ತಾನೂ ತೇಲಿಹೋಗ ಬಲ್ಲದು, ಅನೇಕ ಜೀವಜಂತುಗಳನ್ನೂ ಹೊತ್ತುಕೊಂಡು ಹೋಗ ಬಲ್ಲದು. ಆದರೆ ಬೆಂಡಿನ ಮೇಲೆ ಹತ್ತಿ ಕುಳಿತರೆ, ಬೆಂಡೂ ಮುಳುಗಿ ಹೋಗುತ್ತದೆ, ಹತ್ತಿದವನೂ ಮುಳುಗಿ ಹೋಗುತ್ತಾನೆ. ಅದಕ್ಕಾಗಿಯೇ ಭಗವಂತ ಯುಗಯುಗದಲ್ಲೂ ಗುರುರೂಪ ದಿಂದ ಅವತರಿಸುತ್ತಾನೆ. ಸಚ್ಚಿದಾನಂದನೇ ಗುರು.''

### ಗುರುವಿನಲ್ಲಿ ಅಚಲವಾದ ಶ್ರದ್ಧೆ

ಗುರುಭಕ್ತಿ, ಗುರುವಿನಲ್ಲಿ ಶ್ರದ್ಧೆ ಅಸಾಧ್ಯವನ್ನೂ ಸಾಧ್ಯ ವಾಗಿಸಿ ಬಿಡುತ್ತದೆ. ಗುರು–ಶಿಷ್ಯರ ನೇರ ಸಂಪರ್ಕವಿಲ್ಲದಿದ್ದರೂ ಶಿಷ್ಯನಿಗೆ ಗುರುವಿನಲ್ಲಿ ಅಪ್ರತಿಮವಾದ ಭಕ್ತಿ ವಿಶ್ವಾಸಗಳಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಜ್ವಲಂತ ನಿದರ್ಶನ ಏಕಲವ್ಯನ ಜೀವನ. ಹಸ್ತಿನಾಪುರದ ಹತ್ತಿರ ಒಂದು ಅರಣ್ಯ ಪ್ರದೇಶದಲ್ಲಿ ಹಿರಣ್ಯಧನುಷ್ ಎಂಬ ಬೇಡನು ವಾಸವಾಗಿದ್ದ. ಅವನಿಗೆ ಶೌರ್ಯಪರಾಕ್ರಮಶಾಲಿಯಾದ, ಶ್ರದ್ಧಾವಂತನಾದ ಮಗನಿದ್ದನು. ಅವನೇ ಏಕಲವ್ಯ. ಅವನಿಗೆ ಬಿಲ್ವಿದ್ಯೆಯಲ್ಲಿ ವಿಶೇಷವಾದ ಆಸಕ್ತಿ. ಚಿಕ್ಕವಯಸ್ಸಿನಲ್ಲಿಯೇ ತಂದೆಯಿಂದ ಸ್ವಲ್ಪ ಧನುರ್ವಿದ್ಯೆಯನ್ನು ಕಲಿತು, ಅದರಲ್ಲಿ ಪರಿಣತಿಯನ್ನು ಸಾಧಿ ಸಲು, ಬಿಲ್ವಿದ್ಯೆಯಲ್ಲಿ ಅದ್ವಿತೀಯ ಸಿದ್ಧಿಯನ್ನು ಪಡೆದ ಆಚಾರ್ಯ ದ್ರೋಣರ ಬಳಿ ಹೋದನು. ಆದರೆ ದ್ರೋಣರು ಅವನನ್ನು ಶಿಷ್ಯನಾಗಿ ಸ್ವೀಕರಿಸಲು ನಿರಾಕರಿಸಿದರು. ಆಗ ಏಕಲವ್ಯನು, 'ಅವರೇ ನನ್ನ ಗುರುಗಳು' ಎಂಬ ದೃಢವಾದ ನಂಬಿಕೆಯಿಂದ ಕಾಡಿನಲ್ಲಿ ಅವರ ಪ್ರತಿಮೆಯನ್ನು ಸ್ಥಾಪಿಸಿ, ಪ್ರತಿನಿತ್ಯವೂ ಪ್ರತಿಮೆಗೆ ಪೂಜೆಯನ್ನು ಸಲ್ಲಿಸಿ ಶ್ರದ್ಧೆಯಿಂದ ಸ್ವತಃ ಅಭ್ಯಾಸಕ್ಕೆ ತೊಡಗಿದನು. ಒಂದು ದಿನ ಪಾಂಡವರು ಬೇಟೆಗಾಗಿ ಅದೇ ಕಾಡಿಗೆ ಬಂದರು. ಅವರ ಜೊತೆಯಲ್ಲಿದ್ದ ಬೇಟೆ ನಾಯಿ ಬಂದು ಒಂದೇ ಸಮನೆ ಬೊಗಳುತ್ತಿದ್ದಾಗ, ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದ ಏಕಲವ್ಯನ ಏಕಾಗ್ರತೆಗೆ ಭಂಗ ಉಂಟಾಯಿತು.

ಅವನು ನಾಯಿ ಬೊಗಳುತ್ತಿದ್ದ ಶಬ್ದವನ್ನೇ ಅನುಸರಿಸಿ, ಶಬ್ದವೇಧಿ ವಿದ್ಯೆಯಿಂದ ನಿರಂತರವಾಗಿ ಏಳು ಬಾಣಗಳನ್ನು ಬಿಟ್ಟು ನಾಯಿಯ ಬಾಯಿಯನ್ನು ತುಂಬಿಸಿಬಿಟ್ಟನು. ನಾಯಿ ಕುಂಯಿ ಗುಡುತ್ತ ಪಾಂಡವರ ಬಳಿಗೆ ಹಿಂದಿರುಗಿತು. ಅದನ್ನು ಕಂಡು ಅರ್ಜುನನು ಮೂಕಸ್ಮಿತನಾದನು. ಕಾಡಿನ ಮಧ್ಯೆ ಪ್ರವೇಶಿಸಿದಾಗ ಏಕಲವ್ಯನ ಅಸಾಮಾನ್ಯ ಧನುರ್ವಿದ್ಯೆಯನ್ನು ಕಂಡು ''ನಿನ್ನ ಗುರುಗಳು ಯಾರು?'' ಎಂದು ಅರ್ಜುನನು ಕೇಳಿದಾಗ ''ದ್ರೋಣಾಚಾರ್ಯರು'' ಎಂದು ಏಕಲವ್ಯನು ಉತ್ತರಿಸಿದನು. ಏಕಲವ್ಯನ ಗುರುಶ್ರದ್ಧೆ ಅವನನ್ನು ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡಿತು.

ಶ್ರೀರಾಮಕೃಷ್ಣರ ತರುಣ ಶಿಷ್ಯರಾದ ಲಾಟು ಮಹಾರಾಜ್ ಓದುಬರಹವೂ ಬರದ, ಶಾಸ್ತ್ರಪಾಂಡಿತ್ಯವಿಲ್ಲದ ಸಾಮಾನ್ಯ ಯುವಕ; ಗುರುವಿನಲ್ಲಿದ್ದ ಅದ್ಭುತವಾದ ಭಕ್ತಿ, ಗುರುವಾಕ್ಯದಲ್ಲಿ ಅಪಾರ ಶ್ರದ್ಧೆ ಇವುಗಳಿಂದ ಅವರು 'ಸ್ವಾಮಿ ಅದ್ಭುತಾನಂದ' ಎಂಬ ಸಂನ್ಯಾಸ ನಾಮವನ್ನು ಪಡೆದರು. ಸ್ವಾಮಿ ವಿವೇಕಾನಂದರ ಹದಿಮೂರು ಜನ ಸಂನ್ಯಾಸಿ ಶಿಷ್ಯರೂ ತಮ್ಮ ಗುರುವಿನಲ್ಲಿದ್ದ ಶ್ರದ್ಧೆ ಹಾಗೂ ತಪೋಮಯವಾದ ಜೀವನದಿಂದ ಪಡೆದ ಆಧ್ಯಾತ್ಮಿಕಾನುಭವ, ಜೀವರಲ್ಲಿ ಭಗವಂತನನ್ನು ಕಂಡು ಸಲ್ಲಿಸಿದ ಸೇವೆ, ಮತ್ತು ಲೋಕಸಂಗ್ರಹಕಾರ್ಯ ಸರ್ವರಿಗೂ ಮೇಲ್ಪಂಕ್ತಿಯಾಗಿವೆ. ''ಗುರುಭಕ್ತಿ, ಗುರುವಿನಲ್ಲಿ ಅಚಲ ಶ್ರದ್ಧೆ, ಗುರುವಾಕ್ಯದಲ್ಲಿ ಅಪಾರ ವಿಶ್ವಾಸ – ಇವು ಒಂದು ಕಾಲದಲ್ಲಿ, ಭಾರತವನ್ನು ಶ್ರೇಷ್ಠತೆಯ ಶಿಖರಕ್ಕೇರಿಸಿತು. ಇನ್ನೆಂದಾದರೂ ಮತ್ತೆ ಭಾರತವು ಉನ್ನತಿಯಾಗುವುದಾದರೆ, ಈ ಗುರುಭಕ್ತಿಯ ಸಹಾಯದಿಂದಲೇ ಆಗುವುದು'' ಎಂಬ ಸ್ವಾಮಿ ಬ್ರಹ್ಮಾನಂದರ ವಾಕ್ಯಗಳು ಅತ್ಯಂತ ಮನನೀಯವಾದವುಗಳು.

### ಗುರು-ಶಿಷ್ಯರ ದಿವ್ಯವಾದ ಸಂಬಂಧ

ಭಾರತದಲ್ಲಿ ಗುರು-ಶಿಷ್ಯರ ಸಂಬಂಧ ಅತ್ಯಂತ ಪೂಜ್ಯವಾದುದು. ಗುರು-ಶಿಷ್ಯರ ನಡುವಿನ ಸಂಬಂಧ ಈ ಜನ್ಮಕ್ಕೆ ಸೀಮಿತವಾದುದಲ್ಲ. ಅದು ಅಲೌಕಿಕವಾದ ಜನ್ಮಾಂತರದ ಸಂಬಂಧ. ಇದು ಶಿಷ್ಯನಿಗೆ ಪ್ರಾರಂಭದಲ್ಲಿ ಅರ್ಥವಾಗದಿರಬಹುದು, ಆದರೇ ಗುರುವಾದವನು ಶಿಷ್ಯನನ್ನು ಕಂಡಕೂಡಲೇ ಪತ್ತೆಹಚ್ಚಿಬಿಡುತ್ತಾನೆ. ಇವನೇ ತಮ್ಮ ಆಧ್ಯಾತ್ಮಿಕ ಜೀವನದ ಉತ್ತರಾಧಿಕಾರಿ ಎಂದು ಕಂಡುಕೊಳ್ಳುತ್ತಾನೆ. '**ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾಽನುಶಿಷ್ಟಃ**' ಎಂದು ಕಠೋಪನಿಷತ್ತು ಗುರು-ಶಿಷ್ಯರ ವೈಶಿಷ್ಟ್ಯವನ್ನು ಹೊಗಳುತ್ತದೆ. ಆತ್ಮವಿದ್ಯೆಯನ್ನು ಬೋಧಿಸುವ ಗುರುವೂ ಆಶ್ಚರ್ಯಜನಕವೆಂಬಂತೆ ಸಮರ್ಥನೂ, ಸರ್ವವಿದ್ಯಾಪಾರಂಗತನೂ, ಪ್ರವೀಣನೂ ಆಗಿರಬೇಕು. ಕಲಿಯುವ ಶಿಷ್ಯನೂ ಪ್ರಚಂಡವಾದ ಬುದ್ಧಿಶಕ್ತಿಯನ್ನು ಹೊಂದಿದವನಾಗಿ ಗುರುವನ್ನೇ ಮೀರಿಸುವಂತ ಕುಶಲಿಯಾಗಿರಬೇಕು. ಇಂತಹ ಆಶ್ಚರ್ಯಕರ ಗುರು – ಆಶ್ಚರ್ಯಕರ ಶಿಷ್ಯರ ಸಮಾಗಮದಿಂದ ಜಗತ್ತನ್ನೇ ಬೆರಗುಗೊಳಿಸುವ ಆತ್ಮಜ್ಞಾನವು ಹೊರಹೊಮ್ಮಿ, ಲೋಕಹಿತಕಾರ್ಯವು ಸಾಧಿಸಲ್ಪಡುತ್ತದೆ.

ಇದಕ್ಕೆ ಇತ್ತೀಚಿನ ಅತ್ಯುತ್ತಮ ಉದಾಹರಣೆ ಶ್ರೀರಾಮಕೃಷ್ಣರು ಹಾಗೂ ನರೇಂದ್ರ (ಸ್ವಾಮಿ ವಿವೇಕಾನಂದರು) ಇವರಿಬ್ಬರ ನಡುವಿನ ಅಸಾಧಾರಣ, ಅಲೌಕಿಕವಾದ ಗುರು-ಶಿಷ್ಯರ ಸಂಬಂಧ. ಈ ಸಂಬಂಧ ಜಗತ್ಪ್ರಸಿದ್ಧವಾದುದು. ಭಗವಂತನ ಸಾಕ್ಷಾತ್ಕಾರದ ಹಂಬಲದಿಂದ ಅನೇಕ ವ್ಯಕ್ತಿಗಳನ್ನು, ಸಂಸ್ಥೆಗಳನ್ನು ಸಂಪರ್ಕಿಸಿದ ನರೇಂದ್ರನು ಎಲ್ಲಿಯೂ ಸಮರ್ಪಕವಾದ ಉತ್ತರ ಸಿಗದೆ ಶ್ರೀರಾಮಕೃಷ್ಣರ ಬಳಿಗೆ ಬಂದು ''ಮಹಾಶಯರೇ! ನೀವು ದೇವರನ್ನು ಕಂಡಿದ್ದೀರಾ''? ಎಂದು ಕೇಳಿದನು. ಶ್ರೀರಾಮಕೃಷ್ಣರು ನೇರವಾಗಿ, ಸ್ವಲ್ಪವೂ ದ್ವಂದ್ವಕ್ಕೆಡೆಯಿಲ್ಲದೆ ''ಹೌದು ಕಂಡಿದ್ದೇನೆ. ನಿನ್ನನ್ನು ಕಾಣುವುದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಕಂಡಿದ್ದೇನೆ'' ಎಂದರು. ಶಿಷ್ಯ ಅದ್ಭುತ! ಗುರುವೂ ಪರಮಾದ್ಭುತ! ನರೇಂದ್ರನ ಆಗಮನಕ್ಕಾಗಿ ಬಹುಕಾಲದಿಂದಲೂ ಕಾದಿದ್ದ ಶ್ರೀರಾಮಕೃಷ್ಣರಿಗೆ ತನ್ನ ಪ್ರಿಯಶಿಷ್ಯನ ಆಗಮನದಿಂದ ಅತ್ಯಾನಂದವಾಯಿತು. ಜಗನ್ಮಾತೆಯ ಆದೇಶದಂತೆ ತನ್ನ ಕಾರ್ಯವನ್ನು ಮಾಡಲು ಸಪ್ತರ್ಷಿ ಮಂಡಲದಿಂದ ಬಂದ 'ಋಷಿ' ಇವನೇ ಎಂಬುದನ್ನು ಅವರು ತಕ್ಷಣವೇ ಗುರುತಿಸಿದರು. ಆದರೆ ನರೇಂದ್ರ ಅನೇಕ ಪರೀಕ್ಷೆಗಳ ಮೂಲಕ ಶ್ರೀರಾಮಕೃಷ್ಣರನ್ನು ಗುರುವೆಂದು ಸ್ವೀಕರಿಸಿದನು. ಇಂತಹ ಅಪೂರ್ವ ಸಂಬಂಧ, ಅಪ್ರತಿಮ ಗುರು-ಶಿಷ್ಯರ ಸಮಾಗಮ ನಮ್ಮ ಭಾರತೀಯ ಪರಂಪರೆಯಲ್ಲಿ ಅನೇಕ ಕಡೆ ನೋಡುತ್ತೇವೆ.

### ಉಪಸಂಹಾರ

'ಮನುಷ್ಯಜನ್ಮ, ಮುಮುಕ್ಷುತ್ವ ಹಾಗೂ ಮಹಾತ್ಮರ ಸಂಗ, ಇವು ಭಗವಂತನ ಅನುಗ್ರಹದಿಂದ ಮಾತ್ರ ದೊರೆಯುವುದು' ಎಂದು 'ವಿವೇಕಚೂಡಾಮಣಿ'ಯಲ್ಲಿ ಹೇಳಲಾಗಿದೆ. ಭಗವತ್ಕೃಪೆಯಿಂದ ಪಡೆದ ಈ ಮನುಷ್ಯಜನ್ಮ ಸಾರ್ಥಕತೆಯನ್ನು ಪಡೆಯಬೇಕಾದರೆ ಗುರುವಿನಿಂದ ಮಂತ್ರೋಪದೇಶವನ್ನು ಪಡೆದು ಪರಿಶುದ್ಧವಾದ ಜೀವನವನ್ನು ನಡೆಸುತ್ತ, ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುವುದು ಅತ್ಯಾವಶ್ಯಕ. ಗುರುಭಕ್ತಿಯೇ ನಮ್ಮನ್ನು ಜನನ ಮರಣದ ಚಕ್ರದಿಂದ ಬಿಡುಗಡೆಗೊಳಿಸಿ ಮೋಕ್ಷವನ್ನು ಪಡೆಯುವಂತೆ ಮಾಡುತ್ತದೆ. ಕಬೀರರು ಹೇಳುತ್ತಾರೆ:

**ಉತ್ತಮ ಜನ್ಮ ದೊರೆಯುವುದು**
**ಇದುವೇ ಹರಿ ಕೃಪೆಯೈ**
**ಜನ್ಮ ಇಲ್ಲದಂತಾಗುವುದು**
**ಇದುವೇ ಗುರುಕೃಪೆಯೈ ॥ ಕಬೀರ ॥**

ಇಂತಹ ಪರಮಶ್ರೇಷ್ಠವಾದ ಗುರುಪರಂಪರೆ ನಮ್ಮ ಭಾರತದಲ್ಲಿದೆ. ಸಮಸ್ತ ಗುರುಗಳಿಗೂ ನಮ್ಮ ಶ್ರದ್ಧಾಭಕ್ತಿಪೂರ್ವಕವಾದ ನಮನಗಳು. ✱

# ಮಹಾರಾಣಿ ಚಿಮನಬಾಯಿ - II

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರು ೧೯೦೧ನೆಯ ಇಸವಿ, ಫೆಬ್ರವರಿ ೧೭ನೆಯ ತಾರೀಕಿನಂದು ಜೊಸೆಫಿನ್ ಮ್ಯಾಕ್ಲಿಯಾಡ್‌ಗೆ ಬೇಲೂರು ಮಠದಿಂದ ಬರೆದಿದ್ದ ಪತ್ರವೊಂದರಲ್ಲಿ, ''ನೀನು ಬರೋಡಾಕ್ಕೆ ಭೇಟಿ ಕೊಡುತ್ತೀ ಎಂದು ಅಂದುಕೊಡಿದ್ದೇನೆ. ಅಲ್ಲಿ ನೀನು ಮಹಾರಾಣಿಯನ್ನು ಭೇಟಿ ಮಾಡಲೇಬೇಕು'' ಎಂದು ಬರೆದಿದ್ದಾರೆ. ಸ್ವಾಮಿ ವಿವೇಕಾನಂದರ ಪ್ರಶಂಸೆಗೆ ಪಾತ್ರಳಾಗಿದ್ದ ಈ ಮಹಾರಾಣಿ ಯಾರು? ಅವಳು ಹೇಗೆ ಸ್ವಾಮೀಜಿಯವರ ಸಾನಿಧ್ಯಲಾಭ ಪಡೆಯುವ ಸೌಭಾಗ್ಯ ಪಡೆದಳು? ಈ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುವುದು ನಿಜವಾಗಿಯೂ ಒಂದು ಕುತೂಹಲಕಾರಿಯಾದ ಸಂಗತಿ.

ಸ್ವಾಮಿ ವಿವೇಕಾನಂದರ ಪರಿಭ್ರಮಣೆ ಮುಂದುವರೆದಂತೆ ಅವರು ಗುಜರಾತಿಗೆ ಪ್ರವೇಶಿಸಿದರು. ಅಲ್ಲಿ ಎಷ್ಟೋ ದಿವಾನರನ್ನು ಭೇಟಿಯಾದರಲ್ಲದೆ ಎಷ್ಟೋ ಜನ ಸ್ತ್ರೀಯರಿಗೂ ಸ್ವಾಮೀಜಿಯವರನ್ನು ಕಾಣುವ ಹಾಗೂ ಅವರೊಂದಿಗೆ ಮಾತನಾಡುವ ಸುಯೋಗ ಲಭಿಸಿತ್ತು.

ಬರೋಡಾದ ರಾಜನಾಗಿದ್ದ ಸಯ್ಯಾಜಿರಾವ್ ಗಾಯಕವಾಡರನ್ನು ಸ್ವಾಮೀಜಿ ಭೇಟಿ ಮಾಡಬೇಕಿತ್ತು. ಆದರೆ ಸಯ್ಯಾಜಿರಾವ್ ಊರಲ್ಲಿ ಇರದಿದ್ದ ಕಾರಣದಿಂದ ಅವರ ಭೇಟಿ ಸಾಧ್ಯವಾಗಿರಲಿಲ್ಲ. ಮುಂದಿನ ದಿನಗಳಲ್ಲಿ ಸ್ವಾಮೀಜಿ ಪುಣೆ ಮತ್ತು ಮಹಾಬಲೇಶ್ವರದಲ್ಲಿ ಇದ್ದಾಗ ಸಯ್ಯಾಜಿರಾವ್ ಹಾಗೂ ಆತನ ಹೆಂಡತಿ ಮಹಾರಾಣಿ-೨ ಅವರೊಂದಿಗೆ ಸ್ವಾಮೀಜಿ ಕಾಲಕಳೆಯುವಂತಾಗಿತ್ತು.



ಬರೋಡಾದ ರಾಜ ಸಯ್ಯಾಜಿರಾವ್ ಗಾಯಕವಾಡನ ಎರಡನೆಯ ಹೆಂಡತಿ 'ಚಿಮನಬಾಯಿ'ಯೇ ಮಹಾರಾಣಿ ೨ ಎಂದು ಪ್ರಸಿದ್ಧಳಾಗಿದ್ದಳು. 'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ' ಎನ್ನುವ ಮಾತಿನಂತೆ ಸಯ್ಯಾಜಿರಾವ್‌ನ ಯಶಸ್ವೀ ಜೀವನಕ್ಕೆ ಚಿಮನಬಾಯಿ ಪ್ರೋತ್ಸಾಹ ಹಾಗೂ ಕೈಜೋಡಿಸಿ ಕೆಲಸ ಮಾಡಿದ ರೀತಿಗಳೇ ಸಾಕ್ಷಿ ಎನ್ನಬಹುದು. ಅವಳ ಮೊದಲಿನ ಹೆಸರು ಶ್ರೀಮಂತ ಗಜರಬಾಯಿ ದೇವಿ. ಅವಳ ತಂದೆ ಮಧ್ಯಪ್ರದೇಶದ 'ದೇವಾಸ'ದ ಶ್ರೀಮಂತ ಸರದಾರ ಬಾಜಿರಾವ ಅಮೃತರಾವ ಘಾಟಗೆ. ಅವಳು ಬರೋಡಾದ ಸಯ್ಯಾಜಿರಾವ್ ಗಾಯಕವಾಡ-೨ ನ ವಿವಾಹವಾದ ನಂತರ ಅವಳ ಹೆಸರನ್ನು ಚಿಮನಬಾಯಿ-೨ ಎಂದು ಬದಲಾಯಿಸಲಾಗಿತ್ತು. *(History of Vadodara)*. ೧೮೭೨ ನೆಯ ಇಸವಿಯಲ್ಲಿ ಜನ್ಮತಳೆದಿದ್ದ ಈಕೆಗೆ ಶಿಕ್ಷಣ ನೀಡಲು ಗುರುಗಳು ಮನೆಗೇ ಬಂದು ಬೋಧಿಸುವ ವ್ಯವಸ್ಥೆಯನ್ನು ಆಕೆಯ ಪತಿ ಮಾಡಿದ್ದ. ಮುಂದಾಲೋಚನೆ ಮಾಡಿ ಯಾವಾಗಲೂ ಸಮಾಜದ ಸುವ್ಯವಸ್ಥೆಗಾಗಿ ಹೆಣಗುತ್ತಿದ್ದ ಅವಳ ಗಂಡ ಸಯ್ಯಾಜಿರಾವ್‌ಗೆ ತಮ್ಮ ಪತ್ನಿಯೂ ಒಳ್ಳೆಯ ಪಾಂಡಿತ್ಯ ಪಡೆದವಳಾಗಿ, ಜನ ಹಿತ, ಸ್ತ್ರೀಯರ ಉದ್ಧಾರಕ್ಕಾಗಿ ಶ್ರಮಿಸಬೇಕೆಂಬ ಬಯಕೆಯಿತ್ತು. ಹಾಗೆಯೇ ಅವಳೂ ಕೂಡ ದೂರದರ್ಶಿಯಾಗಿ ಪತಿಯ ಎಲ್ಲ ಸೇವಾಕಾರ್ಯಗಳನ್ನು ಅನುಮೋದಿಸುತ್ತ, ಅವನೊಂದಿಗೆ ತಾನೂ ಸಹಕರಿಸುತ್ತ ಸಮಾಜದಲ್ಲಿ ಶಿಕ್ಷಣದ ಮಹತ್ವವನ್ನು ಜನರಿಗೆ ತಿಳಿಸಿದಳು. ಎಷ್ಟೋ ಸಾರಿ ಬ್ರಿಟಿಷ್ ಅಧಿಕಾರಿಗಳೊಂದಿಗೆ ಸಂತೋಷಕೂಟಗಳಲ್ಲಿ ಭಾಗವಹಿಸುತ್ತಿದ್ದಾಗ್ಯೂ

ತನಗೆ ಸರಿ ಎಂದು ತೋಚಿದ್ದನ್ನು ನಿರ್ಭಿಡೆಯಿಂದ ವ್ಯಕ್ತಪಡಿಸುತ್ತಿದ್ದಳು. ಹೀಗೆಯೇ ಒಂದು ಸಮಾರಂಭದಲ್ಲಿ ಚಿಮನಬಾಯಿ ಕೂಡ ಭಾಗವಹಿಸಿದ್ದಳು. ಆ ಕಾರ್ಯಕ್ರಮದಲ್ಲಿ ಭರತನಾಟ್ಯವನ್ನು ಭಾರತೀಯರು ಮಾಡುತ್ತಿದ್ದಾಗ ಅವರನ್ನು ಅವಮಾನಿಸುವುದಕ್ಕಾಗಿಯೇ ಅಲ್ಲಿ ಇದ್ದ ಎಷ್ಟೋ ಜನ ಬ್ರಿಟಿಷ್ ಅಧಿಕಾರಿಗಳು ತಮ್ಮ ಆಸನದಿಂದ ಎದ್ದು ಹೊರಗಡೆ ನಡೆಯಲಾರಂಭಿಸಿದರು. ಇದನ್ನು ಸಹಿಸಲಾರದ ಚಿಮನಬಾಯಿ ಬ್ರಿಟಿಷರ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದಂತೆ ತಾನೂ ತನ್ನ ಆಸನವನ್ನು ತೊರೆದು, ಹೊರಬಂದು ಅವರ ಸೊಕ್ಕಿಗೆ ತಕ್ಕ ಉತ್ತರ ನೀಡಿದ್ದಳು.

ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಅಂದಿನ ದಿನಗಳಲ್ಲಿ ಸಹಾಯ ಮಾಡುತ್ತಿದ್ದ ಭಿಕಾಜಿ ರುಸ್ತುಂಜಿ ಕಾಮಾಳಿಗೆ ಮಹಾರಾಣಿ ಚಿಮನಬಾಯಿ ಕೂಡ ಕೈ ಜೋಡಿಸಿದ್ದಳು. ಒಂದೆಡೆ ಗೃಹಿಣಿಯಾಗಿ, ಆದರ್ಶ ನಾರಿಯಾಗಿ ಕಂಡು ಬಂದರೆ ಇನ್ನೊಂದೆಡೆ ಸಿಂಹಿಣೀರೂಪದ ಮಹಾರಾಣಿಯಾಗಿ ಮೆರೆದಿದ್ದಳು. ಈ ಸಕಲ ಧೈರ್ಯಗುಣಗಳನ್ನು ಹೊಂದಿದ್ದ ಮಹಾರಾಣಿ ಚಿಮನಬಾಯಿ ಸಹಜವಾಗಿಯೇ ಸ್ವಾಮಿ ವಿವೇಕಾನಂದರ ಪ್ರಶಂಸೆಗೆ ಪಾತ್ರಳಾಗಿದ್ದಳು.

ಸಯ್ಯಾಜಿರಾವ್ ಗಾಯಕವಾಡನು ಪ್ರತಿವರ್ಷ ಬೇಸಿಗೆಯ ವೇಳೆಯಲ್ಲಿ ಅಂದರೆ ಸುಮಾರು ಏಪ್ರಿಲ್, ಮೇ, ಜೂನ್, ಜುಲೈಗಳಲ್ಲಿ ತನ್ನ ಕುಟುಂಬದ ಎಲ್ಲ ಸದಸ್ಯರೊಂದಿಗೆ ಮಹಾಬಲೇಶ್ವರ ಅಥವಾ ಪುಣೆಯಲ್ಲಿ ವಾಸಿಸುತ್ತಿದ್ದ. *(Taken from Fateh Singh Rao's book **Sayyaji Rao of Broda - The Prince and the Man**).* ೧೮೯೨ನೆಯ ಇಸವಿಯಲ್ಲಿ ಮೇ ಅಥವಾ ಜೂನ್ ತಿಂಗಳಿನಲ್ಲಿ ಸ್ವಾಮೀಜಿ ಕೂಡ ಪುಣೆ ಹಾಗೂ ಮಹಾಬಲೇಶ್ವರಗಳಲ್ಲಿ ಕೆಲದಿನಗಳ ಕಾಲ ಇದ್ದರು ಎನ್ನುವುದು ಸ್ವಾಮಿ ಗಂಭೀರಾನಂದರು ಬರೆದ 'ಯುಗನಾಯಕ ವಿವೇಕಾನಂದ' ಎಂಬ ಪುಸ್ತಕದಲ್ಲಿ ಉಲ್ಲೇಖವಾಗಿದೆ. ಅಷ್ಟೇ ಅಲ್ಲದೆ ಲಿಂಬ್ಡಿಯ ಠಾಕೂರ ಸಾಹೇಬರ ಡೈರಿಯಲ್ಲಿ ಕೂಡ ಸ್ವಾಮಿ ವಿವೇಕಾನಂದರು ಮೇ ತಿಂಗಳ ಹದಿಮೂರನೆಯ ತಾರೀಖು, ೧೮೯೨ನೆಯ ಇಸವಿಯಲ್ಲಿ ಪುಣೆಯಲ್ಲಿ ಇದ್ದರು ಎನ್ನುವುದು ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ರಾಜಮನೆತನದವರು ಇವತ್ತಿಗೂ ಆ ಡೈರಿಯನ್ನು ಕಾಯ್ದಿರಿಸಿಕೊಂಡಿದ್ದಾರೆ.

೧೯೦೨ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಸ್ವಾಮಿ ಅಭೇದಾನಂದರು ಕಾಶ್ಮೀರದಲ್ಲಿ ವಾಸವಾಗಿದ್ದಾಗ ಸಯ್ಯಾಜಿರಾವ್ ಹಾಗೂ ಚಿಮನಬಾಯಿ ದಂಪತಿಗಳೂ ಕೂಡ ಅಲ್ಲಿಯೇ ಇದ್ದರು. ಯಾವಾಗ ಸ್ವಾಮಿ ವಿವೇಕಾನಂದರ ಸಹೋದರ ಸಂನ್ಯಾಸಿ ಕೂಡ ಅಲ್ಲಿಯೇ ಇದ್ದಾರೆಂಬುದು ಚಿಮನಬಾಯಿಗೆ ತಿಳಿಯಿತೋ ಆಗ ಅವಳು ಕೂಡಲೇ ಸ್ವಾಮಿ ಅಭೇದಾನಂದರನ್ನು ತಾವಿದ್ದ ಸ್ಥಳಕ್ಕೆ ಆಮಂತ್ರಿಸಿದಳು. ಅವರೊಂದಿಗೆ ಮಾತನಾಡುತ್ತಿದ್ದಾಗ ಬರೋಡದಲ್ಲಿ ಸ್ತ್ರೀಯರಿಗಾಗಿ ಒಂದು ಶಾಲೆಯನ್ನು ಪ್ರಾರಂಭಿಸುವಂತೆ ವಿನಂತಿಸಿಕೊಂಡಳು ಹಾಗೂ ಅದರ ಎಲ್ಲ ವೆಚ್ಚವನ್ನೂ ತಾನೇ ಭರಿಸುವುದಾಗಿಯೂ ತಿಳಿಸಿದಳು. ಸ್ವಾಮಿ ವಿವೇಕಾನಂದರ ಮಹಿಳಾ ಉನ್ನತಿಯ ಮಾರ್ಗಗಳನ್ನು ತುಂಬ ಗಂಭೀರವಾಗಿ ಪರಿಗಣಿಸಿದ್ದ ಇವಳು ಎಸ್. ಎಂ. ಮಿತ್ರ ಎನ್ನುವ ಬಂಗಾಳಿ ಬರಹಗಾರರೊಂದಿಗೆ 'The position of women in Indian Life'' ಎಂಬ ಪುಸ್ತಕವನ್ನು ಬರೆದು ಭಾರತದ ನಾರಿಯರ ಉದ್ಧಾರಕ್ಕಾಗಿ ಶಕ್ತಿಮೀರಿ ಪ್ರಯತ್ನಿಸಿದಳು. ಅವಳ ನಾರಿಯರ ಉದ್ಧಾರದ ಕಳಕಳಿಯನ್ನು ಗ್ರಹಿಸಿ ಅವಳನ್ನು ಪುಣೆಯಲ್ಲಿ ೧೯೨೭ನೆಯ ಜನವರಿಯಲ್ಲಿ ನಡೆದ ಅಖಿಲ ಭಾರತ ಮಹಿಳೆಯರ ಸಮ್ಮೇಳನದ ಅಧ್ಯಕ್ಷೆಯನ್ನಾಗಿ ನೇಮಕ ಮಾಡಲಾಯಿತು. ಯಾವಾಗ ಸ್ತ್ರೀಯರ ವಿದ್ಯಾಭ್ಯಾಸವನ್ನು ಸಮಾಜ ದ್ರೋಹ ಎಂದು ಪರಿಗಣಿಸಲಾಗುತ್ತಿತ್ತೋ ಆಗ ಅವಳು ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದ್ದಳು. ಬಾಲ್ಯವಿವಾಹವನ್ನು ತೀವ್ರವಾಗಿ ಖಂಡಿಸಿದ್ದಳು. ಸ್ತ್ರೀಯರು ಸೆರಗು ಹೊದ್ದುಕೊಂಡೇ ಇರಬೇಕೆಂಬ ಪದ್ಧತಿಯನ್ನೂ ವಿರೋಧಿಸಿ, ಒಂದು ಸಾರಿ ಪತಿಯೊಂದಿಗೆ ನ್ಯಾಯಮಂದಿರದಲ್ಲಿ ಜರುಗಿದ ಒಂದು ಕಾರ್ಯಕ್ರಮದಲ್ಲಿ ತಲೆಯ ಮೇಲಿನ ಸೆರಗು ತೆಗೆದು ಸೋಫಾದಲ್ಲಿ ಎಲ್ಲರೆದುರಿಗೆ ಕುಳಿತುಕೊಂಡು ಬರೋಡಾದಲ್ಲಿ ಪರ್ದಾ ಪದ್ಧತಿಯನ್ನು ಅಂದರೆ ಸ್ತ್ರೀಯರ ಮುಸುಕು ಧರಿಸುವ ಪದ್ಧತಿಯನ್ನು ಕೊನೆಗಾಣಿಸಿದಳು. ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಿದ ಹೆಣ್ಣುಮಕ್ಕಳಿಗೆ ಬಹುಮಾನಗಳನ್ನು ನೀಡಿ ಉತ್ತೇಜಿಸುತ್ತಿದ್ದಳು. ಸ್ತ್ರೀ ಉದ್ಯೋಗ ಕೇಂದ್ರ, ಹೆಣ್ಣುಮಕ್ಕಳ ಶಾಲೆಗಳು, ಆಸ್ಪತ್ರೆಗಳು ಇವೇ ಮೊದಲಾದವುಗಳನ್ನು ಸ್ಥಾಪಿಸಿ ಮಧ್ಯಮ ವರ್ಗದ ಸ್ತ್ರೀಯರಿಗೆ ಹಾಗೂ ವಿಧವೆಯರಿಗೆ ಅನುಕೂಲಗಳನ್ನು ಒದಗಿಸಿಕೊಟ್ಟಳು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಭಾರತದಾದ್ಯಂತ ಶಾಂತಿಯುತವಾದ ಕ್ರಾಂತಿ ಮಾಡಿದ ಮಹಾರಾಣಿ ಚಿಮನಬಾಯಿ-೨, ೧೯೫೮ರ ಆಗಸ್ಟ್ ತಿಂಗಳ ೨೩ರಂದು ಇಹಲೋಕ ಯಾತ್ರೆ ಮುಗಿಸಿದಳು. ✱

> ಸತ್ಯವಚನವೇ ಕಲಿಯುಗದ ತಪಸ್ಸು. ಈ ಯುಗದಲ್ಲಿ ಬೇರೆ ವಿಧದ ತಪಸ್ಸುಗಳನ್ನು ಮಾಡಲು ಬಹಳ ಕಠಿಣ. ಸತ್ಯಾರ್ಥಿಗೆ ಭಗವಂತ ದೊರೆತುಬಿಡುತ್ತಾನೆ. ತುಳಸೀದಾಸ ಹೇಳುತ್ತಾನೆ, 'ಸತ್ಯವಚನ, ಭಗವದಧೀನತೆ, ಪರಸ್ತ್ರೀಯರಲ್ಲಿ ಮಾತೃದರ್ಶನ ಇವು ಮೂರು ಮಹಾ ಸದ್ಗುಣಗಳು. ಇವುಗಳ ಅನುಷ್ಠಾನದಿಂದ ಒಂದು ಪಕ್ಷ ಭಗವಂತನ ಸಾಕ್ಷಾತ್ಕಾರ ದೊರೆಯದೆ ಇದ್ದರೆ ತುಳಸೀದಾಸನನ್ನು ಮಿಥ್ಯಾವಾದಿ ಅಂತ ಕರೆಯಿರಿ.'
>
> — ಶ್ರೀರಾಮಕೃಷ್ಣರು